ರೆಡಿಯಾಗೋದು? ವಿವೇಕಾನಂದರ ಸ್ಟೈಲ್‌ನಲ್ಲಿ ರೆಡಿಯಾಗ್ತಿದ್ದೆ. ಬೇರೆ ನನಗೆ ಗೊತ್ತಿರಲಿಲ್ಲ, ಅಂಗೇ ರೆಡಿಯಾಗಿಬಿಟ್ಟೆ.

ವೇದಿಕೆ ಮುಂದೆ ಮೊದಲ ಸಾಲಿನಲ್ಲಿ ಬಸವಲಿಂಗಪ್ಪನವರು ಕಾಲುಮೇಲೆ ಕಾಲುಹಾಕಿ ಕೂತು ಬಿಟ್ಟಿದ್ದಾರೆ. ನನ್ನ ವೇಷಭೂಷಣ, ಪೇಟ, ನಾಮ, ನನ್ನ ಕಲರ್ ನೋಡಿ ಅವರು, 'ಇವನ್ಯಾವನೋ ಬ್ರಾಹ್ಮಣನನ್ನು ಕರೆಸಿಬಿಟ್ಟು ಅಂಬೇಡ್ಕರ್ ಬಗ್ಗೆ ಹೇಳುಸ್ತಾವ್ರೆ' ಅಂತ ಉರಿಉರಿಯಾಗಿ ಕುದೀತಿದಾರೆ. 'ಶುಕ್ಲಾಂಬರಧರಂ...' ಅಂತ ಶುರು ಮಾಡಿದರೆ ಎಡವಟ್ ಆಗುತ್ತೆ ಅಂತ ಗೊತ್ತಾಗೋಯ್ತು. 'ಬುದ್ಧಸ್ಸೋ ಭಗವತೋ ಸಂಬುದ್ಧ...' ಅಂತ ಶುರುಮಾಡ್ದೆ. ಅದನ್ನು ಕೇಳಿದ ತಕ್ಷಣ ಬಸವಲಿಂಗಪ್ಪನವರು ನಿಧಾನವಾಗಿ ಕಾಲಮೇಲೆ ಕಾಲ ತೆಗೆದು ಗೆಲುವಿನ ಮುಖ ಮಾಡಿದರು.

**ಅಂಬೇಡ್ಕರ ಶುಭ ಚರಿತನ**
**ಸಿರಿಚರಣಕೆ ವಂದಿಪೆ**
**ನಿರುತ ಮುದದಿ ಹರಸೋ ಎನುತ**
**ಮನದೇ ಸ್ಮರಿಸುತ ಪಾಡುವೆ**
**ಎಲ್ಲಿಲ್ಲದ ವೈರ ಸಮರ**
**ತಲ್ಲಣಿಸಿದೆ ಜಗವು**
**ಎಲ್ಲಿರುವೆ ಅಂಬೇಡ್ಕರ ಇನ್ನೊಮ್ಮೆ ಹುಟ್ಟಿಬಾ**
**ಸಿದ್ಧನೇ ಘನ ಶುದ್ಧನೇ ನಿಜ ಬುದ್ಧನೇ ನೀನಾಗಿ ಬಾ**
**ಶುಭ ಚರಿತನ ಸಿರಿಚರಣಕೆ ವಂದಿಪೆ...**



ಅಂತ ಅಂಬೇಡ್ಕರ್ ಹುಟ್ಟಿ ಬೆಳೆದ, ತಾಯಿ- ತಂದೆ, ವಿದ್ಯೆ ಎಲ್ಲವನ್ನು ಹರಿಕಥೆ ರೂಪದಲ್ಲಿ ಹಾಡಿದೆ. ಅಲ್ಲಿರುವವರೆಲ್ಲ ಖುಷಿಯಿಂದ ಚಪ್ಪಾಳೆ ತಟ್ಟಿದರು.

**◆ ಈ ಅಂಬೇಡ್ಕರ್ ಚರಿತೆಯನ್ನು ಎಲ್ಲೆಲ್ಲಿ ಹಾಡಿದ್ದೀರಿ?**

ಸುಮಾರು ಜಾಗಗಳಲ್ಲಿ ಹಾಡಿದ್ದೇನೆ. ಧಾರವಾಡ, ಗುಲ್ಬರ್ಗಾ, ತುಮಕೂರು. ಮೈಸೂರಿನಲ್ಲಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಹಾಡುವಾಗ ಆಗಲೇ ಕೆ.ಎಸ್. ಭಗವಾನ್ ಅವರು ಬಂದು 'ಇದು ಹರಿಕಥೆ ಶಿವಕಥೆ ಅಲ್ಲಪ್ಪ. ಇದನ್ನು 'ಜನಕಥಾಕೀರ್ತನ' ಅಂತ ಇಟ್ಕೋ' ಅಂದ್ರು. 'ಬುದ್ಧ, ಬಸವ, ಅಂಬೇಡ್ಕರ್ ಇವರು ಹರಿ-ಶಿವ ಅಲ್ಲಪ್ಪ. ಅವರು ನಮ್ಮ ನಿಮ್ಮ ಹಾಗೇ ಮನುಷ್ಯರು. ನೀನ್ಯಾಕೆ ಅವರನ್ನು ದೇವರನ್ನಾಗಿ ಮಾಡುತ್ತೀಯಾ? ಅಂಗಾಗಿ ಜನಕಥಾಕೀರ್ತನ ಅಂತ ಕರೆಯಿರಿ' ಅಂತ ಹೇಳಿದರು. ಅಲ್ಲಿಂದ ಮುಂದುಕ್ಕೆ 'ಹರಿಕಥೆ ಕೀರ್ತನ' ಅನ್ನೋದು ಬಿಟ್ಟು 'ಜನಕಥಾಕೀರ್ತನ' ಅಂತ ಕರೆದುಕೊಂಡೆ.

**◆ ಬಾಬಾಸಾಹೇಬರ ನಂತರ ಇನ್ನೂ ಯಾರ್‍ಯಾರ ಕಥೆಗಳನ್ನು ಮಾಡಿದ್ರಿ?**

ಅಂಬೇಡ್ಕರ್ ಜೊತೆಗೆ ಬುದ್ಧ, ಗಾಂಧಿ, ಬಸವಣ್ಣ, ಶಿವಕುಮಾರ ಸ್ವಾಮಿಗಳದ್ದು, ಪುಟ್ಟರಾಜ ಗವಾಯಿಗಳದ್ದು ಮಾಡ್ದೆ. ಗುಬ್ಬಿ ವೀರಣ್ಣ ಅವರದು ಮಾಡ್ದೆ. ಗುಬ್ಬಿ ವೀರಣ್ಣ ಅವರ ಕಥೆಯನ್ನು ಮೈಸೂರಿನ ಆರ್ಟ್ಸ್ ಕಾಲೇಜಿನಲ್ಲಿ ಮೆರೆಸಿಬಿಟ್ಟರು. ಆ ಕಥೆಯ ವಸ್ತು, ಹಾಡು, ಮಾತು, ವಿಜೃಂಭಣೆ ಎಲ್ಲಾ ನಾನೇ ನನಗೆ ತಿಳಿದಂಗೆ ಮಾಡ್ಕಂಡು ಹಾಡ್ತಿದ್ದೆ. ಕೇಳುಗರಿಗೂ ಇಷ್ಟ ಆಯ್ತು.